ಬೇಡವಾಗಿತ್ತು. ಅದೇ ಅವರಿಬ್ಬರ ಜಗಳಕ್ಕೆ ಕಾರಣವಾಗಿತ್ತಾ?"

ಹಂಸಿನಿ ಮೊದಲಬಾರಿಗೆ ತಲೆ ಎತ್ತಿ ನೋಡಿದಳು. ಅವಳ ಕಣ್ಣುಗಳಲ್ಲಿ ಕೋಪ ತುಂಬಿತ್ತು.

"ಅಕ್ಕ ನನಗಾಗಿ ಮದುವೆಯೇ ಬೇಡ ಅಂದಿದ್ದಳು. ಭಾವ ಒತ್ತಾಯ ಮಾಡಿ ನನ್ನನ್ನು ಜೀವನಪೂರ್ತಿ ನೋಡಿಕೊಳ್ಳುವೆ ಎಂದು ಪ್ರಾಮಿಸ್ ಮಾಡಿದ್ದರಿಂದ ಮದುವೆಗೆ ಒಪ್ಪಿಕೊಂಡಿದ್ದು... ಈ ಮಂಗಳಾಳನ್ನು ಕೇಳಿ, ಮದುವೆಯಾಗಿ ಮನೆಯೊಳಗೆ ಕಾಲಿಡುವಾಗಲೇ ಇವಳು ಇಲ್ಲಿದ್ದಳು..."

ಅಮಿತಾ ಆಶ್ಚರ್ಯದಿಂದ ಅಲ್ಲಿಯೇ ನಿಂತು ಎಲ್ಲಾ ಕೇಳಿಸಿಕೊಳ್ಳುತ್ತಿದ್ದ ಮಂಗಳಾ ಕಡೆ ನೋಡಿದಳು.

"ಅವರಿದ್ದ ಮನೆ ಬಿಟ್ಟು ಈ ಮನೆ ಖರೀದಿಸಿದ್ದೂ ಇಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ ರೂಂ ಇದೆ ಅನ್ನುವುದಕ್ಕಾಗಿಯೇ."

"ನಿನಗೇನು ಅನ್ನಿಸುತ್ತದೆ, ನಿನ್ನಕ್ಕ ಬಾಳಿಗಾರನ್ನ ಕೊಲೆ ಮಾಡಿದ್ದಾಳಾ?"

ಅದೇ ಸಮಯಕ್ಕೆ ಅಡುಗೆಮನೆಯಲ್ಲಿ ಪಾತ್ರೆ ಬಿದ್ದ ಶಬ್ದ... ಹಂಸಿನಿ ಬೆಚ್ಚಿ ಬಿದ್ದಳು. ಅಮಿತಾಳ ಮಾತಿಗೆ ಉತ್ತರ ನೀಡದೆಯೇ ಸರಸರನೆ ತನ್ನ ರೂಂ ಸೇರಿಕೊಂಡು ಬಾಗಿಲು ಹಾಕಿಕೊಂಡಳು. ಅಡುಗೆಮನೆಯಿಂದ ಟೀ ಕಪ್‌ನೊಂದಿಗೆ ಮಂಗಳಾ ಹೊರಬಂದಳು.

"ಮೇಡಂ, ಗಂಡಹೆಂಡತಿ ಮಧ್ಯೆ ನಡೆಯುತ್ತಿದ್ದ ಜಗಳಕ್ಕೆ ಇವಳೇ ಕಾರಣ. ನೀವು ಅಂದುಕೊಂಡಷ್ಟು ಅಮಾಯಕಳಲ್ಲ. ಮೊದ ಮೊದಲು ಭಾವ ಅನ್ನುವ ಸಲುಗೆಯಿಂದ ಇದ್ದಳು. ಆಮೇಲೆ ಸಲುಗೆ ಜಾಸ್ತಿಯಾಗಿತ್ತು. ತನ್ನ ವಯಸ್ಸಿನ ಆಸೆಗಳನ್ನು ತೀರಿಸಿಕೊಳ್ಳಲು ಭಾವನನ್ನೇ ಉಪಯೋಗಿಸಿಕೊಳ್ಳಲು ನೋಡಿದ್ದಳು..."

"ಅಂದ್ರೆ, ಈ ಹಂಸಿನಿ ಮತ್ತು ಬಾಳಿಗಾ ಮಧ್ಯೆ ಅಫೇರ್ ಇತ್ತು ಅಂತೀಯಾ? ಅದು ಗೊತ್ತಾಗಿ ನಂದಿನಿ ಶೂಟ್ ಮಾಡಿದ್ದಾಳಾ?"

"ಅದೆಲ್ಲಾ ಏನೂ ಗೊತ್ತಿಲ್ಲ ಮೇಡಂ, ಆದ್ರೆ ಹಂಸಿನಿಗೆ ಮದುವೆ ಮಾಡಿಸೋಣ ಅಂತ ಅದೆಷ್ಟು ಬಾರಿ ನಂದಿನಿ ಹೇಳಿದ್ರೂ ಸಾರ್ ಒಪ್ಪುತ್ತಿರಲಿಲ್ಲ..."

***

"ಸರ್, ಇದು ಹಣದ ವಿಚಾರದ ಕೇಸ್ ಮಾತ್ರವಲ್ಲ, ವಿವಾಹೇತರ ಸಂಬಂಧವೂ ಇದೆ. ಜಗಳ ಕ್ರೆಡಿಟ್ ಕಾರ್ಡ್‌ಗೆ ಆಗಿದ್ದಲ್ಲ. ಅದು ಹಂಸಿನಿಯ ವಿಷಯಕ್ಕೆ ಆಗಿದ್ದು. ಬಹುಶಃ ಆ ಏಳು ಲಕ್ಷ ರೂಪಾಯಿಯ ಬಿಲ್... ನಂದಿನಿ ಹೇಳಿದಂತೆ ಅವಳು ಖರ್ಚು ಮಾಡಿದ್ದು ಇರಲಿಕ್ಕಿಲ್ಲ. ಅದು ಹಂಸಿನಿ ಖರ್ಚು ಮಾಡಿದ್ದು. ಅದರ ಬಗ್ಗೆ ಶುರುವಾದ ಜಗಳ ಬಾಳಿಗಾರ ಸಾವಿನಿಂದ ಮುಗಿದಿದೆ."

ಭೂಷಣ್ ಮಾತಾಡಲಿಲ್ಲ. ಅವನು ಮುಂದಿದ್ದ ಪೋಸ್ಟ್ ಮಾರ್ಟಂ ರಿಪೋರ್ಟ್ ನೋಡುವುದರಲ್ಲಿ ತಲ್ಲೀನನಾಗಿದ್ದ.

"ಸರ್, ಕೊಲೆಗೆ ಮೋಟಿವ್ ಕ್ಲಿಯರ್ ಆಯಿತು."

"ಆದರೆ, ಈ ಪೋಸ್ಟ್ ಮಾರ್ಟಂ ರಿಪೋರ್ಟ್ ಬೇರೆಯೇ ಹೇಳುತ್ತದೆ..." ಭೂಷಣ್ ಗಂಭೀರವಾಗಿ ನುಡಿದ.

"ರಿಪೋರ್ಟ್ ಪ್ರಕಾರ, ಬಾಳಿಗಾಗೆ ಮೂರು ಗುಂಡುಗಳು ತಗುಲಿವೆ. ಮೊದಲನೆಯದು ಪಕ್ಕೆಲುಬಿನ ಭಾಗದಲ್ಲಿ ಬಿದ್ದಿದ್ದು, ಅದರಿಂದ ಬಾಳಿಗಾ ಸತ್ತಿಲ್ಲ. ಅವರು ಸತ್ತಿರೋದು ಇನ್ನುಳಿದ ಎರಡು ಗುಂಡುಗಳಿಂದ. ಅದೂ ಒಂದು ಲಿವರ್‌ನ ಡ್ಯಾಮೇಜ್ ಮಾಡಿದೆ, ಇನ್ನೊಂದು ಪ್ಯಾಂಕ್ರಿಯಾಸ್. ಮೊದಲ ಗುಂಡಿನ ಗಾಯಕ್ಕೂ ಎರಡನೇ ಗುಂಡಿನ ಗಾಯಕ್ಕೂ ಸುಮಾರು ಅರ್ಧ ಗಂಟೆಗಳ ಅಂತರ ಇದೆ..."

ಬೆಚ್ಚುವ ಸರದಿ ಅಮಿತಾಳದ್ದಾಯಿತು.

"ಮೊದಲ ಗುಂಡು ನಂದಿನಿ ಹೇಳಿದ ರೀತಿಯಲ್ಲಿ ಹಾರಿದೆ ಎನ್ನುವುದನ್ನು ನಂಬಿದರೆ ಎರಡನೆಯ ಮತ್ತು ಮೂರನೆಯ ಗುಂಡು ನಂದಿನಿಯ ಹೇಳಿಕೆಗೆ ಮ್ಯಾಚ್ ಆಗಲ್ಲ..."

"ಅಂದರೆ ಸರ್, ನಂದಿನಿ ಕೊಲೆ ಮಾಡಿಲ್ಲವಾ?"

"ಕೊಲೆ ಪ್ರಯತ್ನ ಮಾಡಿರಬಹುದು. ಅಟೆಂಪ್ಟ್ ಟು ಮರ್ಡರ್, ಅಷ್ಟೇ... ಆದ್ರೆ, ಅವರೇ ಕೊಲೆ ಮಾಡಿದ್ದು ಅಂತ ಪ್ರೂವ್ ಮಾಡಕ್ಕೆ ಆಗಲ್ಲ. ಆ ದಿನ ಮನೆಯಲ್ಲಿ ಇದ್ದಿದ್ದು ಕೇವಲ ಬಾಳಿಗಾ, ನಂದಿನಿ ಮತ್ತು ಹಂಸಿನಿ. ಹಂಸಿನಿ ಮೇಲೆ ಬರುವುದಕ್ಕೆ ಆಗದು. ಹಾಗಾಗಿ, ರೂಮಿನಲ್ಲಿ ಇದ್ದಿದ್ದು ಇಬ್ಬರೇ, ಬಾಳಿಗಾ ಮತ್ತು ನಂದಿನಿ. ನಮಗಿರುವ ಮಾಹಿತಿ ಪ್ರಕಾರ